KACM510001892026

<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ , ನ.ರಾ.ಪುರ</u>

<u>ಸಿ ಸಿ ನಂ.143/2026</u>

ಫಿರ್ಯಾದಿ ಃ ಸರ್ಕಾರ (ಎನ್ ಆರ್ ಪುರ ಪೊಲೀಸರಿಂದ)

ವಿರುದ್ಧ

ಆರೋಪಿ ಃ ಧನುಷ ಹೆಚ್.ಜಿ. ಬಿನ್ ಗಣೇಶ ಹೆಚ್.ಬಿ.
ವಯಸ್ಸುಃ 25 ವರ್ಷ,
ವಾಸಃ ಹಳೆದನಿವಾಸ ಗ್ರಾಮ,
ಮೂಡುಬಾಗಿಲು, ಎನ್.ಆರ್. ಪುರ.

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ **351** ರ ಪ್ರಕಾರ ಆರೋಪಿಯ ಹೇಳಿಕೆ

ಪ್ರಶ್ನೆ : 1 ಅಭಿಯೋಜನೆಯ ಪರ ಸಾಕ್ಷಿದಾರರು ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರಃ [illegible]

ಪ್ರಶ್ನೆ : 2 ಪ್ರಾಸಾ 1 ನಾಗರಾಜ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 12.12.2025 ರಂದು ನಮ್ಮ ತಮ್ಮ ಪ್ರಸನ್ನ ಇವರ ತೋಟಕ್ಕೆ ಅಡಿಕೆ ಕೊಯ್ಲು ಕೆಲಸಕ್ಕೆಂದು ಹೋಗಿದ್ದು ಸಂಜೆ 4.00 ಗಂಟೆಗೆ ಟ್ರಾಕ್ಟರ್ ಗೆ ಅಡಿಕೆ ಕಾಯಿ ಮೂಟೆಗಳನ್ನು ಲೋಡ್ ಮಾಡಿಕೊಂಡು ಎನ್.ಆರ್.ಪುರದ ಗುಡೆಹಳ್ಳಿ ಕ್ರಾಸ್ ನಿಂದ ಹೋಗುತ್ತಿರುವಾಗ ಸಂಜೆ 5.00 ಗಂಟೆ ಸುಮಾರಿಗೆ ಸದರಿ ಟ್ರಾಕ್ಟರ್ ಅನ್ನು ನೀವು ದುಡುಕು ಮತ್ತು ನಿರ್ಲಕ್ಷತನದಿಂದ ಜೋರಾಗಿ ಚಾಲನೆ ಮಾಡಿಕೊಂಡು ಹೋಗುತ್ತಿರುವಾಗ ರಸ್ತೆ ತಿರುವಿನಲ್ಲಿ ರಸ್ತೆಗೆ ಅಡ್ಡಲಾಗಿ ನಾಯಿ ಬಂದಿದ್ದರಿಂದ ಟ್ರಾಕ್ಟರ್ ಅನ್ನು ರಸ್ತೆಯ ಬಲಭಾಗಕ್ಕೆ ತಿರುಗಿಸಿದ ಕಾರಣ ತಮ್ಮ, ತಮ್ಮ ಎಡಭಾಗಕ್ಕೆ ಬಿದ್ದಿದ್ದು ಅವರ ಮರ್ಮಾಂಗಕ್ಕೆ ಹೊಡೆತ ಬಿದ್ದು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ರಾತ್ರಿ 8.00 ಗಂಟೆ ಸುಮಾರಿಗೆ ತೀರಿಕೊಂಡಿರುತ್ತಾರೆ ಎಂದು ಚಾಸಾ-9 ರವರು ಫೋನ್ ಮಾಡಿ ತಿಳಿಸಿದ್ದು ನಂತರ ತಾವು ರಾತ್ರಿ 12.00 ಗಂಟೆಗೆ ಎನ್.ಆರ್.ಪುರ ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಬಂದು ನೋಡಲಾಗಿ ತಮ್ಮ ತಮ್ಮನ ತಲೆಗೆ ಸೊಂಟದ ಕೆಳಭಾಗಕ್ಕೆ ಪೆಟ್ಟಾಗಿದ್ದು ನಿಮ್ಮ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ದೂರನ್ನು ಕೊಟ್ಟಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರಃ

ಪ್ರಶ್ನೆ : 3 ಪ್ರಾಸಾ 4 ಅಂಜನಪ್ಪ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 12.12.2025 ರಂದು ಪ್ರಸನ್ನ ಇವರು ತಮ್ಮನ್ನು ಹಾಗೂ ಕೃಷ್ಣಮೂರ್ತಿ ಇವರನ್ನು ಅಡಿಕೆ ಲೋಡ್ ಮಾಡಲು ಕರೆದುಕೊಂಡು ಹೋಗಿದ್ದು, ಸದರಿ ಟ್ರಾಕ್ಟರ್ ಗೆ ನಾನು ಮತ್ತು ಕೃಷ್ಣಮೂರ್ತಿ 30 ಚೀಲ ಅಡಿಕೆಯನ್ನು ಟ್ರಾಕ್ಟರ್ ಗೆ ಲೋಡ್ ಮಾಡಿ ಪ್ರಸನ್ನ ಇವರು ಸದರಿ ಟ್ರಾಕ್ಟರ್ ಅನ್ನು ತೆಗೆದುಕೊಂಡು ಹೋಗುವಂತೆ ನಿಮಗೆ ಹೇಳಿದ್ದು ಸದರಿ ಟ್ರಾಕ್ಟರ್ ನ ಅಡಿಕೆ ಮೂಟೆಗಳ ಮೇಲೆ ಮೃತ ಕೃಷ್ಣ ಮೂರ್ತಿ ಕುಳಿತಿದ್ದು, ಸಂಜೆ 5.00 ಗಂಟೆ ಸುಮಾರಿಗೆ ಗುಡೆಹಳ್ಳಿ ಕ್ರಾಸ್ ನಿಂದ ಮುಂದೆ ಹೋಗುತ್ತಿದ್ದಾಗ ನಾಯಿ ರಸ್ತೆಗೆ ಅಡ್ಡಲಾಗಿ ಬಂದಿದ್ದರಿಂದ ಟ್ರಾಕ್ಟರ್ ಅನ್ನು ಬಲಕ್ಕೆ ತಿರುಗಸಿದ ಕಾರಣ ಟ್ರಾಕ್ಟರ್ ಮೇಲೆ ಕುಳಿತಿದ್ದ ಕೃಷ್ಣಮೂರ್ತಿ ಇವರು ಕೆಳಕ್ಕೆ ಬಿದ್ದು ಮೈ ಕೈಗೆ ಹಾಗೂ ಸೊಂಟದ ಹತ್ತಿರ ರಕ್ತಗಾಯ ಆಗಿದ್ದು, ಅವರನ್ನು ಶಿವಮೊಗ್ಗದ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ರಸ್ತೆ ಮಾರ್ಗದಲ್ಲಿ ಮೃತ ಪಟ್ಟಿರುತ್ತಾರೆ ಸದರಿ ವಿಚಾರವನ್ನು ನಾನು ಅವರ ಅಣ್ಣನಿಗೆ ಹೇಳಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :4 ಪ್ರಾಸಾ 4 ಮುಂದುವರೆದು ತಮ್ಮ ಸಾಕ್ಷದಲ್ಲಿ ದಿಃ 13.12.2025 ರಂದು ತಾವು ತೋರಿಸಿದ ಸ್ಥಳದಲ್ಲಿ ಕೇಶವ ಮೂರ್ತಿ ಹಾಗೂ ಇನ್ನೊಬ್ಬರು ಹಾಜರಿದ್ದು ಪೋಲಿಸರು ಮಹಜರ್ ಅನ್ನು ಮಾಡಿ ಭಾವಚಿತ್ರಗಳನ್ನು ತೆಗೆದ ಬಗ್ಗೆ ಹಾಗೂ ಅದೇ ದಿನ ಅಮಾನತು ಮಹಜರ್ ಅನ್ನು ಮಾಡಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :5 ಪ್ರಾಸಾ 5 ಪ್ರಸನ್ನ ಹೆಚ್.ಪಿ. ಇವರು ತಮ್ಮ ಸಾಕ್ಷ್ಯದಲ್ಲಿ ಹೀಗೆ 6 ತಿಂಗಳ ಹಿಂದೆ ಚಿಟ್ಟಿಕೊಡಿಗೆ ಗ್ರಾಮಕ್ಕೆ ಹೋಗಿ ಅಡಿಕೆ ಮರದಿಂದ ಅಡಿಕೆ ತೆಗೆದು ಸುಮಾರು 35 ಚೀಲ ಅಡಿಕೆಯನ್ನು ಧನುಷ್ ಇವರಿಗೆ ಸೇರಿದ ಸ್ವರಾಜ್ ಟ್ರಾಕ್ಟರ್ ನಲ್ಲಿ ಲೋಡ್ ಮಾಡಿ ನಾನು ಬೈಕ್ ನಲ್ಲಿ ಹೊರಟಿದ್ದು, ಸದರಿ ಟ್ರಾಕ್ಟರ್ ನ ಟ್ರೈಲರ್ ಮೇಲೆ ಕೃಷ್ಣಮೂರ್ತಿ ಇವರು ಕುಳಿತಿದ್ದು ಎನ್.ಆರ್.ಪುರದ ಗುಡೆಹಳ್ಳಿ ಕ್ರಾಸ್ ನಿಂದ ಸ್ವಲ್ಪ ಮುಂದೆ ರಸ್ತೆಯ ತಿರುವಿನಲ್ಲಿ ನಾಯಿ ಅಡ್ಡ ಬಂದಿದ್ದು, ಟ್ರಾಕ್ಟರ್ ಅನ್ನು ರಸ್ತೆಯ ಬಲಕ್ಕೆ ತಿರುಗಿಸಿದಾಗ ಟ್ರೈಲರ್ ಎಡಕ್ಕೆ ವಾಲಿ ಕೃಷ್ಣಮೂರ್ತಿ ಇವರು ಕೆಳಕ್ಕೆ ಬಿದ್ದು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ರಸ್ತೆಯ ಮಾರ್ಗದಲ್ಲಿ ಮೃತ ಪಟ್ಟಿರುವುದಾಗಿ ಆ ಸಂಬಂಧ ತಾವು ಹೇಳಿಕೆಯನ್ನು ಕೊಟ್ಟಿರುವ ಬಗ್ಗೆ ಸಾಕ್ಷ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :6 ಪ್ರಾಸಾ 6 ಶಕುಂತಲಾ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 12.12.2025 ರಂದು ತಮ್ಮ ಗಂಡ ಹಾಗೂ ಅಂಜನಪ್ಪ ಇವರು ಪ್ರಸನ್ನ ಇವರ ಅಡಿಕೆ ಕೆಲಸಕ್ಕೆ ಬಂದಿದ್ದು, ನನ್ನ ಗಂಡ ಮತ್ತು ಅಂಜನಪ್ಪ ಧನುಷ್ ಇವರ

ಟ್ರಾಕ್ಟರ್ ನಲ್ಲಿ ಅಡಿಕೆ ಲೋಡ್ ಮಾಡಿ ನನ್ನ ಗಂಡ ಟ್ರಾಕ್ಟರ್ ನ ಟ್ರೈಲರ್ ಮೇಲೆ ಕುಳಿತಿದ್ದು ಸಂಜೆ 5.00 ಗಂಟೆ ಸುಮಾರಿಗೆ ನೀವು ಸದರಿ ಟ್ರಾಕ್ಟರ್ ಅನ್ನು ರಸ್ತೆ ತಿರುವಿನಲ್ಲಿ ನಾಯಿ ಅಡ್ಡ ಬಂದಿದ್ದರಿಂದ ಟ್ರಾಕ್ಟರ್ ಇಂಜಿನ್ ಅನ್ನು ಬಲಕ್ಕೆ ದುಡುಕು ಮತ್ತು ನಿರ್ಲಕ್ಷತನದಿಂದ ಚಾಲನೆ ಮಾಡಿದ್ದರಿಂದ ತಮ್ಮ ಗಂಡನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ರಸ್ತೆ ಮಾರ್ಗದಲ್ಲಿ ಮೃತ ಪಟ್ಟಿರುವುದಾಗಿ ಆ ಸಂಬಂಧ ತಾವು ಪೋಲಿಸರಿಗೆ ಹೇಳಿಕೆ ಕೊಟ್ಟಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :7 ಪ್ರಾಸಾ 7 ಮಂಜಮ್ಮ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 12.12.2025 ರಂದು ತಮ್ಮ ಮಗ ಹಾಗೂ ಅಂಜನಪ್ಪ ಇವರು ಪ್ರಸನ್ನ ಇವರ ಅಡಿಕೆ ಕೆಲಸಕ್ಕೆ ಬಂದಿದ್ದು, ನನ್ನ ಮಗ ಮತ್ತು ಅಂಜನಪ್ಪ ಧನುಷ್ ಇವರ ಟ್ರಾಕ್ಟರ್ ನಲ್ಲಿ ಅಡಿಕೆ ಲೋಡ್ ಮಾಡಿ ನನ್ನ ಮಗ ಟ್ರಾಕ್ಟರ್ ನ ಟ್ರೈಲರ್ ಮೇಲೆ ಕುಳಿತಿದ್ದು ಸಂಜೆ 5.00 ಗಂಟೆ ಸುಮಾರಿಗೆ ನೀವು ಸದರಿ ಟ್ರಾಕ್ಟರ್ ಅನ್ನು ರಸ್ತೆ ತಿರುವಿನಲ್ಲಿ ನಾಯಿ ಅಡ್ಡ ಬಂದಿದ್ದರಿಂದ ಟ್ರಾಕ್ಟರ್ ಇಂಜಿನ್ ಅನ್ನು ಬಲಕ್ಕೆ ದುಡುಕು ಮತ್ತು ನಿರ್ಲಕ್ಷತನದಿಂದ ಚಾಲನೆ ಮಾಡಿದ್ದರಿಂದ ತಮ್ಮ ಮಗನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ರಸ್ತೆ ಮಾರ್ಗದಲ್ಲಿ ಮೃತ ಪಟ್ಟಿರುವುದಾಗಿ ಆ ಸಂಬಂಧ ತಾವು ಪೋಲಿಸರಿಗೆ ಹೇಳಿಕೆ ಕೊಟ್ಟಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :8 ಪ್ರಾಸಾ 8 ಗುರುದತ್ತ ಕಾಮತ್ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ15.12.2025 ರಂದು ಈ ಪ್ರಕರಣದ ಕಡತವನ್ನು ಚಾಸಾ-17 ರವರಿಂದ ಪಡೆದುಕೊಂಡು ಅವರು ಅಲ್ಲಿಯವರೆಗೆ ಮಾಡಿದ ತನಿಖೆಯನ್ನು ಪರಿಶೀಲಿಸಿ ಅದೇ ದಿನ ಚಾಸಾ-9 ಮತ್ತು ಚಾಸಾ-10 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 17.12.2025 ರಂದು ಅಪಘಾತ ಪಡಿಸಿದ ಟ್ರಾಕ್ಟರ್ ಅನ್ನು ವಾಹನ ತಪಾಸಣೆ ಮಾಡಿಸಿದ ಬಗ್ಗೆ ಹಾಗೂ ಸದರಿ ಟ್ರಾಕ್ಟರ್ ಗೆ ಸಂಬಂಧಿಸಿದ ದಾಖಲಾತಿಗಳನ್ನು ಹಾಜರುಪಡಿಸುವಂತೆ ನೋಟಿಸು ನೀಡಿದ ಬಗ್ಗೆ ಸಾಕ್ಷ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :9 ಪ್ರಾಸಾ 8 ಮುಂದುವರೆದ ತಮ್ಮ ಸಾಕ್ಷ್ಯದಲ್ಲಿ ದಿಃ 18.12.2025 ರಂದು ತಮಗೆ ತನಿಖೆಗೆ ಸಹಕರಿಸುವಂತೆ ನೋಟಿಸು ನೀಡಿದ ಬಗ್ಗೆ ಸದರಿ ಟ್ರಾಕ್ಟರ್ ಮತ್ತು ಟ್ರೈಲರ್ ಅನ್ನು Indemnity ಬಾಂಡ್ ಮೇಲೆ ಬಿಡುಗಡೆ ಗೊಳಿಸಿದ ಬಗ್ಗೆ ಮೃತನ ಶವ ಪರೀಕ್ಷಾ ವರದಿಯನ್ನು ಪಡೆದುಕೊಂಡ ಬಗ್ಗೆ. ದಿಃ 30.01.2026 ರಂದು ವಾಹನ ತಪಾಸಣಾ ವರದಿಯನ್ನು ಸ್ವೀಕರಿಸಿ ನಿಮ್ಮ ವಿರುದ್ಧ ಧೋಷಾರೋಪಣಾ ಪಟ್ಟಿ ಸಲ್ಲಿಸಿದ ಬಗ್ಗೆ ಸಾಕ್ಷ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :10 ಪ್ರಾಸಾ 9 ನಿರಂಜನ್ ಗೌಡ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ13.12.2025 ರಂದು ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿದ ಬಗ್ಗೆ ಹಾಗೂ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗೆ ಕಳುಹಿಸಿದ ಬಗ್ಗೆ ಅದೇ ದಿನ ಮೃತ ಕೃಷ್ಣಮೂರ್ತಿ ಇವರ ಶವ ಪಂಚನಾಮೆಯನ್ನು ಚಾಸಾ-2 ರಿಂದ ಚಾಸಾ-4 ರವರ ಸಮಕ್ಷಮ ಬೆಳಗ್ಗೆ 11.30 ರಿಂದ 1.30 ರ ವರೆಗೆ ಮಾಡಿ ಆ ಕಾಲಕ್ಕೆ ಭಾವಚಿತ್ರ ತೆಗೆದ ಬಗ್ಗೆ ಸಾಕ್ಷ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ: ಹೌದು

ಪ್ರಶ್ನೆ :11 ಪ್ರಾಸಾ 9 ಮುಂದುವರೆದ ತಮ್ಮ ಸಾಕ್ಷ್ಯದಲ್ಲಿ ದಿಃ ಅದೇ ದಿನ ಕೃತ್ಯ ಸ್ಥಳವಾದ ಗುಡ್ಡೆಹಳ್ಳಿ ಶೇಡಿಗಾರು ಬಳಿ ಹೋಗಿ ಚಾಸಾ-7 ಮತ್ತು ಚಾಸಾ-8 ರವರ ಸಮಕ್ಷಮ ಕೃತ್ಯ ಸ್ಥಳದ ಪಂಚನಾಮೆಯನ್ನು ಸಂಜೆ 4.30 ರಿಂದ 5.30 ರವರೆಗೆ ಮಾಡಿ ಆ ಕಾಲಕ್ಕೆ ಸದರಿ ಸ್ಥಳದ ಭಾವಚಿತ್ರವನ್ನು ತೆಗೆದ ಬಗ್ಗೆ ಮತ್ತು ಚಾಸಾ-10 ರವರ ಮನೆಯ ಬಳಿ ಹೋಗಿ ಚಾಸಾ-7 ಮತ್ತು ಚಾಸಾ-8 ರವರ ಸಮಕ್ಷಮ ಸಂಜೆ 6.00 ಗಂಟೆಯಿಂದ 6.45 ರ ಅವಧಿಯಲ್ಲಿ ಅಮಾನತು ಮಹಜರ್ ಅನ್ನು ಮಾಡಿ A.R.T.O. ಕಚೇರಿಗೆ ವಾಹನ ತಪಾಸಣೆ ಮಾಡಿ ವರದಿ ನೀಡುವಂತೆ ಮನವಿ ಸಲ್ಲಿಸಿದ ಬಗ್ಗೆ ಮತ್ತು ಪ್ರಕರಣದ ಕಡತವನ್ನು ಚಾಸಾ-18 ರವರಿಗೆ ವಹಿಸಿಕೊಟ್ಟ ಬಗ್ಗೆ ಸಾಕ್ಷ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ: ಹೌದು.

ಪ್ರಶ್ನೆ :12 ನೀವು ಏನಾದರು ಹೇಳುವುದು ಇದೆಯೇ?

ಉತ್ತರಃ ಏನು ಇಲ್ಲ.

ಪ್ರಶ್ನೆ :13 ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ ?

ಉತ್ತರಃ ಇಲ್ಲ

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗು ಸರಿಯಾಗಿದೆ ಎಂದು ದೃಢಿಕರಿಸಲಾಗಿದೆ.

ದಿನಾಂಕ 11 ನೇ ದಿವಸ ಆಗಸ್ಟ್ ಮಾಹೇ 2026 ನೇ ಇಸವಿ

11/8.

(ರಘುನಾಥ ಗೌಡ ಕೆ.ಟಿ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್.ಸಿ. ನ.ರಾ.ಪುರ